**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 75 ಪ್ರಾ.ಸಾ. : 46**

| | |
|---|---|
| ಸಾಕ್ಷಿಯ ಹೆಸರು | : ವಿಕ್ಟರ್ ಬಸ್ತ್ಯಾವ್ ಫರ್ನಾಂಡಿಸ್ |
| ತಂದೆಯ ಹೆಸರು | : ಬಸ್ತ್ಯಾವ್ ಫರ್ನಾಂಡಿಸ್ |
| ವಯಸ್ಸು | : 71 ವರ್ಷ |
| ಉದ್ಯೋಗ | : ನಿವೃತ್ತ, ಸರ್ಕಾರಿ ನೌಕರ. |
| ವಾಸ | : ಧಾರವಾಡ. |

**ದಿನಾಂಕಃ 25-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2012 ಮತ್ತು 2013 ರಲ್ಲಿ ಕುಮಟಾ ತಹಶೀಲ್ದಾರ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಕರ್ನಾಟಕ ಲೋಕಾಯುಕ್ತ ಕಾರವಾರದ ಆರಕ್ಷಕ ನಿರೀಕ್ಷಕರು ದಿನಾಂಕ 22.06.2012 ರಂದು ಪತ್ರ ಬರೆದು ಶ್ರೀ ನರೇಂದ್ರ ಗೋವಿಂದರಾಯ್ ಹಿತ್ತಲಮಕ್ಕಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಂಕೋಲಾ ರವರಿಗೆ ಸಂಬಂಧಿಸಿದಂತೆ ಕುಮಟಾ ತಾಲೂಕು ಮತ್ತು ಗೋಕರ್ಣದಲ್ಲಿ ಇರುವ ಕೆಲವು ಜಮೀನುಗಳ ಮಾಹಿತಿಯನ್ನು ಪೂರೈಸುವಂತೆ ಕೋರಿದ್ದರು. ಈಗ ಆ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಕೋರಿಕೆ ಪತ್ರವನ್ನು ನಿಪಿ-244 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-244(ಎ) ಎಂದು ಗುರುತಿಸಲಾಯಿತು. ನಾನು ನನ್ನ ಕಚೇರಿಯ ಕಡತ ಮತ್ತು ಗಣಕಯಂತ್ರದಲ್ಲಿ ಇದ್ದ ದತ್ತಾಂಶವನ್ನು ಪರಿಶೀಲಿಸಿ ಅವರು ಕೇಳಿದ್ದ ಮಾಹಿತಿಯನ್ನು ನೀಡಿರುತ್ತೇನೆ. ಅವರು ಖುದ್ದಾಗಿ ಸದರಿ ದಾಖಲಾತಿಗಳನ್ನು ನನ್ನಿಂದ ನನ್ನ ಕಚೇರಿಗೆ ಬಂದು ಪಡೆದಿರುತ್ತಾರೆ. ಒಟ್ಟು 9 ಸರ್ವೆನಂಬರ್ ಜಮೀನಿನ ಬಗ್ಗೆ ನಾನು ನಮ್ಮ ಗಣಯಕಂತ್ರದಿಂದ ಪಹಣಿ ಪತ್ರಿಕೆಗಳನ್ನು ನೀಡಿರುತ್ತೇನೆ. ಈಗ ಅವುಗಳನ್ನು ನೋಡಿರುತ್ತೇನೆ. ಅವಗಳನ್ನು ನಿಪಿ-245 ಎಂದು ಗುರುತಿಸಲಾಯಿತು. ಸದರಿ ಪಹಣಿ ಪತ್ರಿಕೆಗಳಿಗೆ ರುಜು ಬೇಕಾಗಿರುವುದಿಲ್ಲ. ಅವುಗಳು ಗಣಕಯಂತ್ರದಿಂದ ಸೃಜನೆ ಮಾಡಲಾಗಿದೆ. ಅವುಗಳನ್ನು ಪಡೆದ ಬಗ್ಗೆ ಆರಕ್ಷಕ ನಿರೀಕ್ಷಕರು ಒಂದು ಪಹಣಿ ಪತ್ರಿಕೆಯಲ್ಲಿ ರುಜು ಮಾಡಿರುತ್ತಾರೆ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀಮತಿ ಪಿ ಸಿ ಕೆ ರವರಿಂದ:–**

2. ನಾನು ನೀಡಿರುವ ಪಹಣಿ ಪತ್ರಿಕೆಗಳಲ್ಲಿ ನಮೂದಿಸಿರುವ ಆಸ್ತಿ ಎಲ್ಲಾ ಆರೋಪಿಯ ಪಿತ್ರಾರ್ಜಿತ ಆಸ್ತಿ ಮತ್ತು ಆರೋಪಿಗೆ ಅವರ ತಂದೆಯಿಂದ ಸದರಿ ಆಸ್ತಿ ಬಂದಿದೆ ಎಂದರೆ ಹೌದು.

**ಮರು ವಿಚಾರಣೆಃ ವಿ.ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.